ಪಕ್ಕದಲ್ಲಿ ಆಳದಲ್ಲಿ ಹರಿಯುತ್ತಿದ್ದ ಭದ್ರಾ ನಾಲೆಯಿಂದ ಕೊಡಗಳಲ್ಲಿ ನೀರು ತುಂಬಿ ಹೊಲಕ್ಕೆ ಹನಿಸಿದಳು. ನಾಲೆಯ ದಡವನ್ನು ಹತ್ತಿ ಇಳಿದು ನಿತ್ರಾಣವಾದರು ಚಲ ಬಿಡದೆ ವಾರಪೂರ್ತಿ ನೀರು ಹೊತ್ತ ಮೇಲೆ ಒಣಭೂಮಿ ಹಸಿಯಾಯ್ತು. ಪಾತಿ ಕಟ್ಟಿ ತರಕಾರಿ ಬೀಜ ಊರಿದಳು. ನಿತ್ಯ ನೇಮದಂತೆ ಸಸಿಗಳಿಗೆ ನೀರುಣಿಸಿ ಸಲಹಿದಳು. ನೋಡು ನೋಡುತ್ತಿದ್ದಂತೆ ಸುತ್ತಲಿನ ಒಣ ಹೊಲಗಳ ನಡುವೆ ಹಸಿರ ಸಿರಿ ಒಡಮೂಡಿ ನಳನಳಿಸಿತು. ಊರ ಮಂದಿ ಬೆಕ್ಕಸ ಬೆರಗಾದರು.

ಬೆಳೆದ ವಿವಿಧ ಬಗೆಯ ತರಕಾರಿ ಸೊಪ್ಪುಗಳನ್ನು ಹತ್ತಿರದ ಊರುಗಳ ಸಂತೆಗಳಲ್ಲಿ ಮಾರಾಟ ಮಾಡಿ ರತ್ನಕ್ಕ ಎಲ್ಲರ ಬಾಯಲ್ಲಿ 'ತರಕಾರಿ ರತ್ನಕ್ಕ' ಳಾಗಿ ರೂಪಾಂತರ ಹೊಂದಿದಳು. ಹಗಲಿರುಳು ಹೊಲದಲ್ಲಿ ದುಡಿದು, ತರಕಾರಿ ಮಾರಿ ಹೆಣ್ಣು ಮಕ್ಕಳ ಮದುವೆ ಮಾಡಿ ಮುಗಿಸಿದಳು. ಗೆಲುವಿನ ನಗು ಅವಳ ಮುಖದಲ್ಲಿ ಹಸಿರಾಗಿ ಪ್ರತಿಫಲಿಸುತ್ತಿತ್ತು.

ಹಿರಿಯ ಮಗಳು ನಾಗವ್ವ ಗಂಡನೊಂದಿಗೆ ಹೊಂದಿಕೆಯಾಗದೆ ತವರಿಗೆ ಬಂದು ಸೇರಿಕೊಂಡಳು. ಬಾಲ್ಯದಿಂದಲೂ ಹಠಮಾರಿ ಸ್ವಭಾವದ ನಾಗವ್ವ, ತನಗನಿಸಿದ್ದನ್ನು ಮಾಡದೆ ಬಿಡುತ್ತಿರಲಿಲ್ಲ. ಮನೆಗೆಲಸದ ಜೊತೆಗೆ ಹೊಲದಲ್ಲೂ ಅವ್ವನಿಗೆ ಹೆಗಲಿಗೆ ಹೆಗಲು ಕೊಟ್ಟು ದುಡಿಯುತ್ತಿದ್ದಳು. ಹೊಲ ಮನೆಗೆ ಓಡಾಡುತ್ತಾ ಊರ ಗಂಡಸರ ಕಣ್ಣಿಗೆ ಹಬ್ಬವಾಗಿದ್ದಳು. ಅವಳಿಗೂ ಬೇಲಿ ದಾಟುವ ಬಯಕೆ. ಆದರೆ ಜೊತೆಯಲ್ಲಿ ಬೆಂಕಿಯಂತಹ ಅವ್ವ. ಆರಿಸಲಾರದ ಕಾಮದ ಕುಲುಮೆಯಲ್ಲಿ ಸಿಲುಕಿ ನರಳುತ್ತಿದ್ದ ನಾಗವ್ವಳಿಗೆ ಭೀಮಪ್ಪ ಬಲೆ ಹೆಣೆಯುತ್ತಿದ್ದ. ಅವನೊಳಗೆ ಕೈಜಾರಿ ಹೋಗಿದ್ದ ರತ್ನಕ್ಕನ ಮೇಲೆ ದ್ವೇಷ ಹೊಗೆಯಾಡುತ್ತಿತ್ತು. ಅವ್ವನ ಬದಲಿಗೆ ಮಾಗಿದ ಯೌವ್ವನದ ಮಗಳನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳಲು ಉತ್ಸುಕನಾಗಿದ್ದ.

ಊರಿನ ಬೀದಿಗಳಲ್ಲಿ, ಹೊಲ ತೋಟಗಳ ಕಿರುದಾರಿಯಲ್ಲಿ ನಾಗವ್ವ ಒಬ್ಬಳೆ ಸಿಕ್ಕಾಗ ಭೀಮಪ್ಪ ಕಾಮದ ಉಸಿರಲ್ಲಿ ಮಾತನಾಡಿಸುತ್ತ, ಅವಳ ಗೋಳಿನ ಕಥನಕ್ಕೆ ಕಿವಿಯಾಗುತ್ತ, ಟೆಂಟ್ ಸಿನಿಮಾದ ಬಣ್ಣದ ಲೋಕವನ್ನು ಅವಳೊಳಗೆ ಅರಳಿಸುತ್ತ, ಸಣ್ಣ ಪುಟ್ಟ ಹಣಕಾಸಿನ ನೆರವು ನೀಡುತ್ತ ಸಮಯ ಕಾಯುತ್ತಲಿದ್ದ.

ನಾಗವ್ವ ಕೂಡ ಭೀಮಪ್ಪನ ಕೈ ಸೋಕಿದಾಗ ರೋಮಾಂಚನಗೊಳ್ಳುತ್ತ, ಉದ್ರೇಕಗೊಳ್ಳುತ್ತ, ಅವನ ಬಲಿಷ್ಠ ತೋಳುಗಳಲ್ಲಿ ಬಂಧಿಯಾಗಲು ತುದಿಗಾಲ ಮೇಲೆ ನಿಂತಿದ್ದಳು. ಒಂದು ಸುಡು ಬೇಸಿಗೆಯ ನಡುಹಗಲು ನೀರು ತುಂಬಲು ಕೊಡದೊಂದಿಗೆ ನಾಲೆಗೆ ಇಳಿದ ರತ್ನಕ್ಕನನ್ನು ಹಿಂದಿನಿಂದ ಯಾರೋ ತಳ್ಳಿದಂತಾಗಿ, ಮುಗ್ಗರಿಸಿ ನೀರಿಗೆ ಬಿದ್ದು ಅದರ ರಭಸಕ್ಕೆ ಸಿಲುಕಿ ಕೊಚ್ಚಿ ಹೋದಳು.

ಹುಡುಕಿದವರಿಗೆ ಬಸವರಾಜಪುರದ ಹತ್ತಿರದ ಗೇಟಿಗೆ ಸಿಕ್ಕಿಹಾಕಿಕೊಂಡಿದ್ದ ರತ್ನಕ್ಕನ ಹೆಣ ಸಿಕ್ಕಿತು. ಪೊಲೀಸುಪೋಸ್ಟ್ ಮಾರ್ಟಂ ಎಲ್ಲಾ ಮುಗಿದಾದ ಮೇಲೆ ಅವಳ ಪ್ರೀತಿಯ ತರಕಾರಿ ಹೊಲದ ಮೂಲೆಯೊಂದರಲ್ಲಿ ಮಣ್ಣಾದಳು.

ಮೂರು ದಿನಗಳ ನಂತರ ರಾತ್ರಿ ಓಡಾಡುವವರಿಗೆ ಒಂಟಿಯಾಗಿ ಬುಟ್ಟಿ ಹೊತ್ತು ತಿರುಗಾಡುವ ಹೆಣ್ಣು ಕಾಣಿಸಿಕೊಳ್ಳತೊಡಗಿದಳು. ರಸ್ತೆಯಲ್ಲಿ ಕಾಲು ದಾರಿಯಲ್ಲಿ ಹೊಲಗದ್ದೆ ತೋಟಗಳ ನಡುವೆ ಇದ್ದಕ್ಕಿದ್ದಂತೆ ಗೋಚರಿಸಿ ಮಾಯವಾಗುತ್ತಿದ್ದಳು. ಸುದ್ದಿ ಊರೆಲ್ಲ ಹರಡಿ, "ರತ್ನಕ್ಕ ದೆವ್ವವಾಗಿದ್ದಾಳೆ" ಎಂದು ಅಂತೆ ಕಂತೆಗಳಿಗೆ ಕೈಕಾಲು ಮೂಡಿ ಊರವರ ಮನದ ಓಣಿಯಲ್ಲಿ ಕುಣಿಯಲಾರಂಭಿಸಿತು. ಜನ ಇರುಳು ಒಂಟಿಯಾಗಿ ತಿರುಗಾಡುವುದನ್ನು ಕೈ ಬಿಟ್ಟರು.

ರವಿ ಮಾತು ಚೆಲ್ಲಿ ಮೌನವಾದ. ಶಿವಕುಮಾರ ಕೇಳಿದ ದೀರ್ಘ ಮೌನ ಮುರಿದು, 'ಯಾರಿಗೂ ಅದು ನಾಗವ್ವ ಎಂದು ಅನುಮಾನ ಬರಲಿಲ್ವಾ? ಅದು ಹೇಗೆ ಸಾಧ್ಯ?' ಎಂದ ಚಡಪಡಿಕೆಯಿಂದ.

'ನಾಗವ್ವ ನೋಡಲು ಸುಮಾರಾಗಿ ರತ್ನಕ್ಕನನ್ನೇ ಹೋಲ್ತಾಳೆ. ಸ್ವರವೂ ಕೂಡ ಹಾಗೆ. ಅದಲ್ಲದೆ ರತ್ನಕ್ಕನ ಸೀರೆ ಉಟ್ಟು ಬುಟ್ಟಿ ಹೊತ್ತರೆ ಥೇಟ್ ರತ್ನಕ್ಕನೇ. ಜೊತೆಗೆ 'ಗಾಳಿ' ಸುದ್ದಿ ಹರಡಿದರೆ ಹತ್ತಿರ ಹೋಗಿ ನೋಡುವ ಧೈರ್ಯ ಯಾರಿಗಿರುತ್ತೆ?. ಗಾಳಿ ಸುದ್ದಿ ಹಬ್ಬಿಸುವಲ್ಲಿ ಭೀಮಪ್ಪನ ಕೈವಾಡವೂ ಇರಬಹುದು? ಯಾರಿಗೂ ಕಾಣದ್ದು ನಿನಗೆ ಕಾಣ್ತು. ಅದ್ಸರಿ ನಿನಗೆ ಆಕೆಯ ಮೇಲೆ ಸಂಶಯ ಹೇಗೆ ಮೂಡ್ತು?' ಎಂದ ರವಿ ಕುತೂಹಲಕ್ಕೆ ತೆರೆ ಎಳೆಯಲು.

'ನಾವು ಮಾತನಾಡುತ್ತ ಹೋಗುವಾಗ ಅವಳು ಮಳಲಿಯ ಗಾಡಿಯ ವಿಷಯ ಪ್ರಸ್ತಾಪಿಸದಿದ್ದರೆ ನನಗೆ ಕುತೂಹಲ ಮೂಡುತ್ತಿರಲಿಲ್ಲ. ಅಂತಹ ಅವೇಳೆಯಲ್ಲಿ ಅದೇ ದಾರಿಯಲ್ಲಿ ಸಾಗುವ ಗಾಡಿಯಾತನನ್ನು ಮಾತನಾಡಿಸಿದರಲ್ಲವೆ ಯಾವ ಊರು ಎಂದು ತಿಳಿಯುವುದು? ಮಾತನಾಡಿಸಿದ್ದರೆ, ಅವನು ಅವಳನ್ನು ಗಾಡಿಯಲ್ಲಿ ಹತ್ತಿಸಿಕೊಂಡು ಹೋಗಿರುತ್ತಿದ್ದ. ಒಬ್ಬಳೆ ಏಕೆ ನಡೆದು ಹೋಗುತ್ತಿದ್ದಳು? ಅಲ್ಲದೆ ಅಂದು ಶುಕ್ರವಾರವಲ್ಲ. ಚನ್ನಗಿರಿ ಸಂತೆ ಶುಕ್ರವಾರ ತಾನೆ? ಆಕೆ ಅಸ್ಪಷ್ಟ ಉತ್ತರ ಕೊಟ್ಟಾಗಲೇ ನನಗೆ ಅನುಮಾನ ಈಕೆ ಯಾರಿರಬಹುದೆಂದು? ಜೊತೆಗೆ ಅವಳ ಮಾತಿನಲ್ಲಿ ಕಂಪನವಿತ್ತು. ನಾನು ಅವಳ ದಾರಿಯ ತೊಡರಾಗಿದ್ದೆ. ಮೂತ್ರದ ನೆಪ ಮಾಡಿಕೊಂಡು ಮಾಯವಾದಳು' ಮಾತು ಮುಗಿಸಿದ ಶಿವಕುಮಾರನ ಮುಖದಲ್ಲಿ ತುಂಟತನ ಲಾಸ್ಯವಾಡುತ್ತಿತ್ತು.

# ಸಣ್ಣಯ್ಯ ಕಂಡ ಕೊಳ್ಳಿದೆವ್ವ

ಕೆ.ಪಿ.ಸತ್ಯನಾರಾಯಣ

ಗಡಂಗಿಗೆ ಹೋಗಿ ಎಣ್ಣೆ ಹಾಕಿ ಮನೆಗೆ ಬಂದ ಸಣ್ಣಯ್ಯನಿಗೆ ಕುಡಿದ ನಶೆ ಇಳಿದಿದ್ದಲ್ಲದೇ ಮೈಯೆಲ್ಲಾ ಗಡ ಗಡ ನಡುಕದ ಜತೆಗೆ ವಿಪರೀತ ಜ್ವರ. ಹೆಂಡತಿ ಜಯಮ್ಮ ಏನು ಮಾಡಲೂ ತೋಚದೆ ಅವನ ಹಣೆಯ ಮೇಲೆ ತಣ್ಣೀರ ಬಟ್ಟೆ ಹಾಕುತ್ತಾ, ಅದು ಒಣಗಿದ ಮೇಲೆ ಮತ್ತೆ ಮತ್ತೆ ಒದ್ದೆ ಮಾಡುತ್ತಾ, 'ಇದೇನಾಯ್ತೋ ಶಿವ್ನೇ' ಎಂದು ಗರಬಡಿದವಳಂತೆ ಕೂತಿದ್ದಳು. ಚಿಕ್ಕ ಚಿಕ್ಕ ಮಕ್ಕಳಾದ ಆನಂದ, ಸರೋಜರು ಒಮ್ಮೆ ಅಪ್ಪನನ್ನು ಮತ್ತೊಮ್ಮೆ ಅಮ್ಮನನ್ನು ನೋಡುತ್ತಾ ಏನೂ ತಿಳಿಯದೇ ಪಿಳಿ ಪಿಳಿ ಕಣ್ಣು ಬಿಡುತ್ತಿದ್ದವು. ಸಣ್ಣಯ್ಯಾ ಎಚ್ಚರ ತಿಳಿದಾಗೊಮ್ಮೆ 'ಅಯ್ಯಪ್ಪೋ... ಬೆಂಕಿ... ಬೆಂಕಿ...ದೆಯ್ಯ... ದೆಯ್ಯಾ... ಮೋಹಿನಿ ದೆಯ್ಯಾ ನನ್ನುನ್ನ ಅಮಿಕ್ಕತೀತೆ.... ಯಾರಾದ್ರು ಬರ್‍ರಪ್ಪೋ.... ಬಿಡುಸ್ರಪ್ಪೋ...' ಎಂದು ಕೂಗಿ ಮತ್ತೆ ಅರೆಪ್ರಜ್ಞೆಗೆ ಜಾರುತ್ತಿದ್ದ.

ಜಯಮ್ಮನಿಗೆ ತನ್ನ ಗಂಡ ಕುಡಿಯೋದು ಗೊತ್ತಿದ್ದರೂ ಏನೂ ಮಾಡುವ ಹಾಗಿರಲಿಲ್ಲ. ಇವಳು ಕಾಸು ಕೊಡದೆ ಸತಾಯಿಸಿದರೆ, ಹಾಲು ಹಾಕೋ ಮನೆಗಳಲ್ಲಿ ಅಡ್ವಾನ್ಸ್ ಆಗಿ ದುಡ್ಡು ಇಸಿದುಕೊಂಡು ಕುಡಿದು ಬರುತ್ತಿದ್ದ. 'ಅಮ್ಮಾರೇ, ನನ್ ಗಂಡುನ್ ತಾವ ದುಡ್ಡು ಕೊಡ್ಬ್ಯಾಡ್ರಿ. ಕುಡ್ದು ಬತ್ತಾನೆ ನನ್ ಗಂಡ' ಅಂತ ತಾನು ಹಾಲು ಕೊಡುತ್ತಿದ್ದ ಮನೆಗಳಲ್ಲಿ ಅವಳು ಹೇಳಿರುತ್ತಿದರೂ 'ನನ್ ಹೆಂಡ್ತೀನೇ ಹೇಳಿ ಕಳ್ವೈ. ಮಗೀಗೆ ಔಸ್ದೀಗೆ, ಹಸೀಗೆ ಹುಲ್ಲಿಗೆ ಬೇಕಂತೆ' ಎಂದು ಒಂದೊಂದು ಸಲ ಒಂದೊಂದು ಕಾರಣ ಹೇಳಿ ಹಣ ಪಡೆಯುತ್ತಿದ್ದ. ತಾನಂತೂ ಒಂದು ಕಾಸೂ ಸಂಪಾದಿಸುವುದಿಲ್ಲವೆಂದು ಶಪತ ತೊಟ್ಟವನಂತೆ ಕುಡಿತ ನಿದ್ದೆ ಕಾಡು ಹರಟೆಗಳಲ್ಲೇ ಕಾಲ ಕಳೆಯುತ್ತಿದ್ದ. 'ಒಸಿ ಕೆರೆ ತಾವ್ಕೆ ಹೋಗಿ ದನೀನಾದ್ರೂ ಮೆಯ್ಸ್ಕಂಡು ಬರಾಕ್ಕಾಕ್ಕಿಲ್ವಾ' ಎಂದು ಇವಳು ಹೇಳಿದ್ದನ್ನು ಕಿವಿಯ ಮೇಲೆ ಹಾಕಿಕೊಳ್ಳುತ್ತಲೇ ಇರಲಿಲ್ಲ ಅವನು. ಹಟ್ಟಿಯ ಕಸ ಬಾಚುವುದು, ಹಸುಗಳ ಹಾಲು ಹಿಂಡುವುದು, ಅವುಗಳನ್ನು ಮೇಯಿಸಿಕೊಂಡು ಬರುವುದನ್ನೂ ಜಯಮ್ಮನೇ ಮಾಡಬೇಕಿತ್ತು. ಮನೆಯ ಮಾಮೂಲಿ ಕೆಲಸ, ಅಡುಗೆ, ಮಕ್ಕಳ ಯೋಗಕ್ಷೇಮ, ವರ್ತನೆಯ ಮನೆಗಳಿಗೆ ಹಾಲು ಕೊಟ್ಟು ಬರುವುದೂ... ಇವು ಇದ್ದಿದ್ದೇ.

'ಅಲ್ಲಾ ಜಯಮ್ಮಾ, ನಿಂಗೆ ಬೇಜಾರಾಗಲ್ವೇ? ಇಷ್ಟೆಲ್ಲಾ ತಾಪತ್ರಯ ಇದ್ರೂ ಯಾವಾಗ್ಲೂ ನಗ್ತಾ ಇರ್ತೀಯಲ್ಲಾ' ಎಂದು ನಾನೊಮ್ಮೆ ಕೇಳಿದರೆ 'ಅವುನ್ನೆಲ್ಲಾ ತಲೆಗಾಕ್ಕಂಡು ಕೂತ್ರೆ, ತಲೆ ಕೆಟ್ಟೋಯ್ತದೆ.